ಶ್ರೀ ಪಿ. ಎಸ್. ಜಯವಂತ (ಸಿರ್ಸಿ) :- ಮಾನ್ಯ ಉಪಾಧ್ಯಕ್ಷರೆ, ಸಚಿವರು ಕೊಟ್ಟಿರುವ ಉತ್ತರ ಸತ್ಯಕ್ಕೆ ದೂರವಾದುದು. ಸಿರ್ಸಿಯ ಉಪ-ನೊಂದಾವಣೆ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಲಿ, ತಾತ್ಕಾಲಿಕವಾದ ಸಹಾಯಕರು ಆಗಲಿ ಅಲ್ಲಿ ಇರುವುದಿಲ್ಲ. ಸಿರ್ಸಿ ಉಪ-ನೊಂದಾವಣೆ ಕಚೇರಿಗೆ ಮೂರು ತಾಲ್ಲೂಕುಗಳ ವ್ಯವಹಾರ ಅಲ್ಲಿ ಇರುವುದರಿಂದ ಅಲ್ಲಿ ಕೆಲಸದ ಒತ್ತಡವು ಬಹಳ ಇರುವುದರಿಂದ ಅಲ್ಲಿನ ಜನರಿಗೆ ಬಹಳ ತೊಂದರೆ ಯಾಗಿದೆ. ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ :- ಮಾನ್ಯ ಉಪಾಧ್ಯಕ್ಷರೆ, ಸತ್ಯಕ್ಕೆ ದೂರವಾದುದು ಏನೂ ಇಲ್ಲ. ಸತ್ಯಕ್ಕೆ ಹತ್ತಿರವಾಗಿಯೇ ಇದೆ. ಉಪ-ನೊಂದಾವಣೆ ಕಚೇರಿ ಕಾರವಾರ; ಇದರಲ್ಲಿ ಸರಾಸರಿ ರಿಜಿಸ್ಟರ್ ಆಗಿರುವುದು ಮೂರು. ಉಪ ನೊಂದಾವಣೆ ಕಚೇರಿ, ಸಿರ್ಸಿ ಇಲ್ಲಿ ಸರಾಸರಿ ನೊಂದಣಿ ಆಗಿರತಕ್ಕಂಥದ್ದು ದಿವಸಕ್ಕೆ 4. ಉಪ-ನೊಂದಾವಣೆ ಕಚೇರಿ ಹಳಿಯಾಳ, ಸರಾಸರಿ ನೊಂದಣಿ ಆಗಿರುವುದು ಇಲ್ಲಿ 3. ಹೊನ್ನಾವರ ಉಪನೊಂದಾವಣೆ ಕಚೇರಿಯಲ್ಲಿ 3. ಕುಮುಟಾದಲ್ಲಿ 2 ಸರಾಸರಿ ಆಗಿರುವುದು. ಅಕಸ್ಮಾತ್ ದ್ವಿತೀಯ ದರ್ಜೆ ಗುಮಾಸ್ತನ ಹುದ್ದೆ ಅಲ್ಲಿ ಇಲ್ಲಿ ಸ್ವಲ್ಪ ವ್ಯತ್ಯಾಸಗಳು ಇದ್ದರೆ ಈಗಾಗಲೇ ಅಪಾಯಿಂಟ್ ಮೆಂಟ್ ಮಾಡುತ್ತಾ ಇದ್ದೇವೆ. ಇದರಲ್ಲಿ ಸತ್ಯಕ್ಕೆ ದೂರವಾದುದು ಏನೂ ಅಲ್ಲ. ಎಲ್ಲೆಲ್ಲಿ ಅವರು ಹೇಳಿದ ಹಾಗೆ ದ್ವಿತೀಯ ದರ್ಜೆ ಗುಮಾಸ್ತರು ಇಲ್ಲ ಅಲ್ಲಿ ನಾವು ವಿಚಾರ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ವಿಷಯ :- ಲಾಲಾಬಾಗ್ ಸಸ್ಯ ಕ್ಷೇತ್ರದ ಅಭಿವೃದ್ಧಿ :

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 399 (2643)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಲಾಲ್‌ಬಾಗ್ ಸಸ್ಯ ತೋಟವನ್ನು ಅಭಿವೃದ್ಧಿಪಡಿಸಲು 1995-96 ನೇ ಸಾಲಿನಲ್ಲಿ ಯೋಜನೆಗಳನ್ನು ಹಾಕಿಕೊಂಡಿದೆಯೇ?

ಆ) ಹಾಗಿದ್ದಲ್ಲಿ 1995-96 ನೇ ಸಾಲಿನಲ್ಲಿ ಲಾಲ್‌ಬಾಗ್ ಸಸ್ಯತೋಟ ನಿರ್ವಹಣೆ ಗಾಗಿ ಮತ್ತು ಇತರೆ ವಿವಿಧ ಕಾರ್ಯಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲು ಯೋಜಿಸ ಲಾಗಿದೆ.?

ಇ) ಕೈಗೊಂಡಿರುವ ವಿವಿಧ ಅಭಿವೃದ್ಧಿ ಯೋಜನೆಗಳ ವಿವರಗಳೇನು?

ಈ) ಇದುವರೆಗೆ ಎಷ್ಟು ಹಣ ವಿರ್ಚು ಮಾಡಲಾಗಿದೆ?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ಹೌದು

ಆ) ಲಾಲ್‌ಬಾಗ್ ಸಸ್ಯ ತೋಟ ನಿರ್ವಹಣೆಗೆ ಮತ್ತು ಇತರೆ ವಿವಿಧ ಕಾರ್ಯ ಗಳಿಗಾಗಿ 1995-96 ನೇ ಸಾಲಿನಲ್ಲಿ ರೂ. 30.00 ಲಕ್ಷ ಅನುದಾನವನ್ನು ನಿಗಧಿಗೊಳಿಸ ಲಾಗಿದೆ.

ಇ) 1) ಕೆಂಪೇಗೌಡ ಗೋಪುರದ ಸುತ್ತಮುತ್ತ "ರಾಕ್ ಗಾರ್ಡನ್" ಅಭಿವೃದ್ಧಿ ಪಡಿಸುವುದು.

2) ಲಾಲ್‌ಬಾಗ್ ಗಾಜಿನ ಮನೆ, ಪ್ರತಿಮೆ ಉದ್ಯಾನವನ ಹಾಗೂ ಮರೀಗೌಡ ಉದ್ಯಾನವನಗಳ ಸುತ್ತ ಲಾನುಗಳನ್ನು ನವೀಕರಿಸುವುದು.

3) ಬೀಜ ಪರೀಕ್ಷಾ ಕೇಂದ್ರದ ಮುಂಭಾಗದಲ್ಲಿ ಈಗಾಗಲೇ ತಯಾರಿಸಿರುವ ನಕ್ಷೆ ಯಂತೆ ಉದ್ಯಾನವನ ಅಭಿವೃದ್ಧಿಪಡಿಸುವುದು.

4) ಲಾಲ್‌ಬಾಗ್ ಮುಖ್ಯ ದ್ವಾರದಿಂದ ಪ್ಲಾರಿಕಲ್ಚರ್ ವಿಭಾಗದವರೆವಿಗೆ ಕಾಂಪೌಂಡ್ ಎತ್ತರಿಸುವುದು.

5) ಸೈಪ್ರಸ್‌ಲಾನ್, ಪೈಕಸ್‌ಲಾನ್, ಗುಲಾಬಿವನ ಮತ್ತು ಗಾಜಿನಮನೆ ಪ್ರದೇಶಗಳಿಗೆ ಹೆಚ್ಚಿನ ನೀರಾವರಿ ಸೌಕರ್ಯ ಒದಗಿಸುವುದು.

6) ಧನ್ವಂತರಿ ಪ್ರದೇಶದಲ್ಲಿ ಸಂಕನ್ ಉದ್ಯಾನವನ ಅಭಿವೃದ್ಧಿಪಡಿಸುವುದು.

7) ಪ್ರಮುಖ ಸ್ಥಳಗಳಲ್ಲಿ ಗ್ರಾನೈಟ್ ಬೆಂಚುಗಳನ್ನು ಅಳವಡಿಸುವುದು.

8) ಲಾಲ್‌ಬಾಗ್ ಸಸ್ಯತೋಟದ ಕೆರೆಯ ಸುತ್ತಲೂ ಇರುವ ರಸ್ತೆಗೆ ಮರಳು ಮತ್ತು ಗ್ರಾವೆಲ್ ಹಾಕುವುದು, ಅಂಚು ಕಲ್ಲುಗಳನ್ನು ಸರಿಪಡಿಸುವುದು ಹಾಗೂ ಕೆರೆಯ ಬದುವನ್ನು ಬಲಪಡಿಸುವುದು.

9) ಫಲ ಪುಷ್ಪ ಪ್ರದರ್ಶನಗಳ ಸಮಯದಲ್ಲಿ ಗಾಜಿನ ಮನೆಯ ವಿದ್ಯುದ್ದೀಕರಣ ಕೆಲಸ ಮಾಡುವುದು.

10) ಲಾಲ್‌ಬಾಗ್ ಸಸ್ಯ ತೋಟದ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

11) ಲಾಲ್‌ಬಾಗ್ ಕೆರೆಯಲ್ಲಿ ಬೆಳೆದಿರುವ "ಐಕಾರ್ನಿಯ" ಮತ್ತು "ಜೊಂಡು ಹುಲ್ಲು" ತೆಗೆಯುವುದು.

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ಹೌದು

ಆ) ಲಾಲ್‌ಬಾಗ್ ಸಸ್ಯ ತೋಟ ನಿರ್ವಹಣೆಗೆ ಮತ್ತು ಇತರೆ ವಿವಿಧ ಕಾರ್ಯ ಗಳಿಗಾಗಿ 1995-96 ನೇ ಸಾಲಿನಲ್ಲಿ ರೂ. 30.00 ಲಕ್ಷ ಅನುದಾನವನ್ನು ನಿಗಧಿಗೊಳಿಸ ಲಾಗಿದೆ.

ಇ) 1) ಕೆಂಪೇಗೌಡ ಗೋಪುರದ ಸುತ್ತಮುತ್ತ "ರಾಕ್ ಗಾರ್ಡನ್" ಅಭಿವೃದ್ಧಿ ಪಡಿಸುವುದು.

2) ಲಾಲ್‌ಬಾಗ್ ಗಾಜಿನ ಮನೆ, ಪ್ರತಿಮೆ ಉದ್ಯಾನವನ ಹಾಗೂ ಮರೀಗೌಡ ಉದ್ಯಾನವನಗಳ ಸುತ್ತ ಲಾನುಗಳನ್ನು ನವೀಕರಿಸುವುದು.

3) ಬೀಜ ಪರೀಕ್ಷಾ ಕೇಂದ್ರದ ಮುಂಭಾಗದಲ್ಲಿ ಈಗಾಗಲೇ ತಯಾರಿಸಿರುವ ನಕ್ಷೆ ಯಂತೆ ಉದ್ಯಾನವನ ಅಭಿವೃದ್ಧಿಪಡಿಸುವುದು.

4) ಲಾಲ್‌ಬಾಗ್ ಮುಖ್ಯ ದ್ವಾರದಿಂದ ಪ್ಲಾರಿಕಲ್ಚರ್ ವಿಭಾಗದವರೆವಿಗೆ ಕಾಂಪೌಂಡ್ ಎತ್ತರಿಸುವುದು.

5) ಸೈಪ್ರಸ್‌ಲಾನ್, ಪೈಕಸ್‌ಲಾನ್, ಗುಲಾಬಿವನ ಮತ್ತು ಗಾಜಿನಮನೆ ಪ್ರದೇಶಗಳಿಗೆ ಹೆಚ್ಚಿನ ನೀರಾವರಿ ಸೌಕರ್ಯ ಒದಗಿಸುವುದು.

6) ಧನ್ವಂತರಿ ಪ್ರದೇಶದಲ್ಲಿ ಸಂಕನ್ ಉದ್ಯಾನವನ ಅಭಿವೃದ್ಧಿಪಡಿಸುವುದು.

7) ಪ್ರಮುಖ ಸ್ಥಳಗಳಲ್ಲಿ ಗ್ರಾನೈಟ್ ಬೆಂಚುಗಳನ್ನು ಅಳವಡಿಸುವುದು.

8) ಲಾಲ್‌ಬಾಗ್ ಸಸ್ಯತೋಟದ ಕೆರೆಯ ಸುತ್ತಲೂ ಇರುವ ರಸ್ತೆಗೆ ಮರಳು ಮತ್ತು ಗ್ರಾವೆಲ್ ಹಾಕುವುದು, ಅಂಚು ಕಲ್ಲುಗಳನ್ನು ಸರಿಪಡಿಸುವುದು ಹಾಗೂ ಕೆರೆಯ ಬದುವನ್ನು ಬಲಪಡಿಸುವುದು.

9) ಫಲ ಪುಷ್ಪ ಪ್ರದರ್ಶನಗಳ ಸಮಯದಲ್ಲಿ ಗಾಜಿನ ಮನೆಯ ವಿದ್ಯುದ್ದೀಕರಣ ಕೆಲಸ ಮಾಡುವುದು.

10) ಲಾಲ್‌ಬಾಗ್ ಸಸ್ಯ ತೋಟದ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

11) ಲಾಲ್‌ಬಾಗ್ ಕೆರೆಯಲ್ಲಿ ಬೆಳೆದಿರುವ "ಐಕಾರ್ನಿಯ" ಮತ್ತು "ಜೊಂಡು ಹುಲ್ಲು" ತೆಗೆಯುವುದು.

12) ತಾವರೆ ಕೊಳದ ಸುತ್ತಮುತ್ತಲಿನ ಪ್ರದೇಶವನ್ನು ವಿವಿಧ ಜಾತಿಯ ಅಲಂಕಾರದ ಗಿಡಗಳನ್ನು ನಾಟಿಮಾಡಿ ಅಭಿವೃದ್ಧಿ ಪಡಿಸುವುದು.

ಈ) 31-8-95 ರವರೆವಿಗೆ ರೂ. 9,05,000.00 ಹಣ ವಿರ್ಚು ಮಾಡಲಾಗಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಶ್ರೀ ರಾಮಲಿಂಗರೆಡ್ಡಿ ಪರವಾಗಿ) :- ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಪ್ರಶ್ನೆ ಕೇಳಿರತಕ್ಕಂಥದ್ದು ಮತ್ತು ಉತ್ತರ ಕೊಟ್ಟಿರತಕ್ಕಂಥದು ಸ್ವಲ್ಪ ವ್ಯತ್ಯಾಸ ಇದೆ. ಅದೇನೆಂದರೆ ಲಾಲ್‌ಬಾಗ್ ನಮ್ಮ ಇಡೀ ಬೆಂಗಳೂರು ನಗರಕ್ಕೆ ಅಷ್ಟೇ ಅಲ್ಲ ಇಡೀ ಜಗತ್ತಿನಲ್ಲೂ ಇದಕ್ಕೆ ಒಂದು ಪ್ರತ್ಯೇಕವಾದ ಸ್ಥಾನ ಇದೆ. ಮತ್ತು ಲಕ್ಷಾಂತರ ಪ್ರೇಕ್ಷಕರು ಲಾಲ್‌ಬಾಗ್‌ಗೆ ಪ್ರತಿ ತಿಂಗಳು ಭೇಟಿ ಕೊಡುತ್ತಾರೆ. ಇದು ಬೆಂಗಳೂರು ನಗರದ ಒಂದು ಅದ್ಭುತ. ಅಲ್ಲಿ ಮಾಡಬೇಕಾದಂಥ ವಿವಿಧ ಕಾರ್ಯಕ್ರಮಗಳು, ಬೇರೆ ಬೇರೆ ಕಾಮಗಾರಿ ಗಳಿಗೆ ಸ್ವಲ್ಪ ತತ್ಸಾರ ಮಾಡುತ್ತಿದ್ದಾರೆ. ಈ ಲಾಲ್‌ಬಾಗ್ ಬಹಳ ಹಿಂದಿನದು. ಆದರೆ ಅದನ್ನು ಇವತ್ತು ಅಭಿವೃದ್ಧಿಪಡಿಸುವುದಕ್ಕೆ ಬೇಕಾಗಿರತಕ್ಕಂಥ ಯೋಜನೆಗಳನ್ನು ಏನು ಹಾಕಿ ದಿರಿ, ಅದನ್ನು ಮೆಯಿಂಟೇನ್ ಮಾಡುವುದುಕ್ಕೆ ಏನು ಹಣ ವಿರ್ಚು ಮಾಡುತ್ತಾ ಇದ್ದೀರಿ, ಅದನ್ನು ಹೆಚ್ಚು ಮಾಡಬೇಕು. ಮತ್ತು ಅದನ್ನು ಸಮಗ್ರವಾಗಿ ಇನ್ನೂ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಪಡಿಸಲಿಕ್ಕೆ ಏನು ಯೋಜನೆ ಹಾಕಿದ್ದೀರಿ ಮತ್ತು ಅತಿಕ್ರಮಣ ಮಾಡಲಿಕ್ಕೆ ಸಾಧ್ಯತೆ ಗಳು ಕಂಡುಬರತಕ್ಕಂಥ ಗುಮಾನಿಗಳು ಏನಿವೆ ಅದನ್ನು ತಡೆಯಲಿಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ ಎಂದು ನಾನು ಉಪ ಪ್ರಶ್ನೆ ಯನ್ನು ಕೇಳುತ್ತಾ ಇದ್ದೇನೆ.

ಶ್ರೀ ಡಿ. ಟಿ. ಜಯಕುಮಾರ್ :- ಈ ಒಂದು ಸಸ್ಯತೋಟವನ್ನು ಲಾಲ್‌ಬಾಗ್ ಎಂದು ಏನು ಕರೆಯುತ್ತೇವೆ ಇಡೀ ವಿಶ್ವಕ್ಕೆ ಖ್ಯಾತಿಯನ್ನು ಪಡೆದಿರತಕ್ಕಂಥ ಲಾಲ್‌ಬಾಗ್‌ಗೆ ಇದನ್ನು ಅಭಿವೃದ್ಧಿ ಪಡಿಸಲಿಕ್ಕೆ 1994-95 ರಲ್ಲಿ 30 ಲಕ್ಷ ರೂಪಾಯಿಗಳನ್ನು ಈಗಾಗಲೇ ನಾವು ನಿಗದಿ ಪಡಿಸಿದ್ದೇವೆ. ಅಬರಲ್ಲಿ, ಈಗಾಗಲೇ 9.5 ಲಕ್ಷ ರೂಪಾಯಿಗಳನ್ನು ವಿರ್ಚು ಮಾಡಿದ್ದೇವೆ. ಅಲ್ಲಿರುವ ಲಾನ್‌ಗಳು ಕೆಲವು ಕಡೆ ಪ್ಯಾಚ್‌ಗಳು ಇವೆ. ಕೆಲವು ಕಡೆ ಸರಿ ಯಾಗಿಲ್ಲ. ಆ ಲಾನ್‌ನ್ನು ರಿಪ್ಲೇಸ್ ಮಾಡುವಂಥದ್ದನ್ನೂ ಕೂಡ ಮಾಡುತ್ತಿದ್ದೇವೆ. ಲಾಲ್ ಬಾಗ್‌ನ ಕೆರೆಯಲ್ಲಿರುವ ಹೂಳನ್ನು ತೆಗೆದು ಆ ಕೆರೆಯ ಸೌಂದರ್ಯವನ್ನು ಹೆಚ್ಚು ಮಾಡು ವುದಕ್ಕೆ ಹಣವನ್ನು ವಿರ್ಚು ಮಾಡುತ್ತಿದ್ದೇವೆ. ಸರ್ವತೋಮುಖ ಅಭಿವೃದ್ಧಿಗೋಸ್ಕರ ಈಗಾ ಗಲೇ ಒಂದು ಹೊಸ ರೂಪು-ರೇಪೆಗಳನ್ನು ನಾವು ತಯಾರು ಮಾಡಿದ್ದೇವೆ. ಆ ಪ್ರಕಾರ 30 ಲಕ್ಷ ಹೆಚ್ಚು ಅನುದಾನವನ್ನು ಮಾಡಿ ಅದರ ಪ್ರಕಾರ ವಿರ್ಚು ಮಾಡುತ್ತಿದ್ದೇವೆ. ಈಗಾ ಗಲೇ 9 ಲಕ್ಷ ರೂಪಾಯಿ ವಿರ್ಚುಮಾಡಿದ್ದೇವೆ. ಮತ್ತು ಒಳಗಡೆ ಜನ ಓಡಾಡುವಂಥ ರಸ್ತೆ ಏನಿತ್ತು ಅಲ್ಲಿ ಜನ ಸರಿಯಾಗಿ ಓಡಾಡುವುದಕ್ಕೆ ಆಗುತ್ತಿರಲಿಲ್ಲ. ಬೆಳಗಿನ ಸಮಯದಲ್ಲಿ ಅಲ್ಲಿ ಯಾರ್ಯಾರು ವಾಕ್ ಮಾಡುತ್ತಾರೆ ಅವರ ಕಡೆಯಿಂದ ಸುಮಾರು ನೂರಾರು ಪತ್ರಗಳು ಬಂದಿದ್ದವು. ಇಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ, ಬಹಳ ಕಲ್ಲುಗಳು ಇವೆ ಇದನ್ನು ಸರಿಪಡಿಸಬೇಕೆಂದು ಹೇಳಿ ಪತ್ರಗಳು ಬಂದಿದ್ದವು. ಈಗಾಗಲೇ ಸುಮಾರು 9 ಲಕ್ಷ ರೂಪಾಯಿ ವಿರ್ಚು ಮಾಡಿ ರಸ್ತೆಯನ್ನೂ ಕೂಡ ರಿಪೇರಿ ಮಾಡಿಸಿದ್ದೇವೆ. ಇನ್ನೂ ಅಲ್ಲಿ ಅಭಿವೃದ್ಧಿ ಕೆಲಸಗಳು ಹೆಚ್ಚು ಆಗಬೇಕು. ಅದರ ಕಡೆಗೆ ಹೆಚ್ಚು ಗಮನಕೊಟ್ಟು ಕೆಲಸ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಲಾಲ್‌ಬಾಗ್‌ನ ಸುತ್ತಲೂ ಸಣ್ಣಪುಟ್ಟ ವರ್ಕ ಶಾಪ್‌ಗಳು, ಸಣ್ಣಪುಟ್ಟ ಕಾರ್ಖಾನೆಗಳು ಈ ರೀತಿ ಬೆಳೆದು ಬರುತ್ತಿವೆ. ಲಾಲ್‌ಬಾಗ್‌ನ ಪರಿಸರದ ಮೇಲೆ ಮತ್ತು ಅದರ ಸೌಂದರ್ಯದ ಮೇಲೆ ಹೊಡೆತ ಬೀಳತಕ್ಕಂಥದ್ದು ಒಂದು. ಇನ್ನೊಂದು ಪರಿಸರದ ಮಾಲಿನ್ಯದ ಪ್ರಶ್ನೆ. ಲಾಲ್‌ಬಾಗ್‌ನ ಸುತ್ತಮುತ್ತಲೂ ಪೆಟ್ಟಿಗೆ ಅಂಗಡಿಗಳ, ವರ್ಕಶಾಪ್‌ಗಳ ಅತಿಕ್ರಮಣ ಆಗುತ್ತಿದೆ. ಕೆರೆಯನ್ನು ಏನಾದರೂ ಬೇರೆ ರೀತಿಯಲ್ಲಿ ಲಾಲ್‌ಬಾಗ್‌ಗೆ ಪೂರಕವಾಗಿ ಅಭಿವೃದ್ಧಿ ಪಡಿಸಲಿಕ್ಕೆ ಸಾಧ್ಯ ಇದೆಯೇ? ಮತ್ತು 30 ಲಕ್ಷ ರೂಪಾಯಿ ಖರ್ಚು ಏನು ಮಾಡುತ್ತೇವೆ ಎಂದು ಹೇಳಿದಿರಿ ಅದು ಯಾವುದಕ್ಕೂ ಸಾಕಾಗುವುದಿಲ್ಲ. ಆ ಹಣ ಬಹಳ ಕಡಿಮೆ ಇದೆ. ಅದನ್ನು ಹೆಚ್ಚು ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಸಲಹೆ ಮಾಡುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ :- ಹಿಂದೆ ಇದ್ದಂಥ ಸಂದರ್ಭದಲ್ಲಿ ಅತಿಕ್ರಮಣ ಮಾಡುವುದಕ್ಕೆ ಅವಕಾಶ ಇತ್ತು. ಈಗ ಯಾವುದೇ ಕಾರಣಕ್ಕೂ ಕೂಡ ಅತಿಕ್ರಮಣ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಬಂದೋಬಸ್ತ್ ಆದಂಥ ಕಾಂಪೌಂಡ್‌ನ್ನು ಈಗಾಗಲೇ ನಿರ್ಮಿಸಲಾಗಿದೆ. ಮೊದಲು ಒಳಚರಂಡಿ ನೀರು ಈ ಕೆರೆಗೆ ಬರುತ್ತಿತ್ತು. ಆ ನೀರಿನಿಂದ ಕೆರೆಯಲ್ಲಿ ಮೀನುಗಳು ಸತ್ತುಹೋದವು. ಪರೀಕ್ಷೆ ಮಾಡಿಸಿದಾಗ ಇದೇ ನೀರಿನಿಂದ ಸತ್ತಿವೆ ಎಂದು ತಿಳಿಯಿತು. ಈಗ ಆ ನೀರನ್ನು ಬೇರೆ ಕಡೆಗೆ ವರ್ಗಾಯಿಸಲು ಬೆಂಗಳೂರು ಕಾರ್ಪೋರೇಷನ್ ರವರು ಒಪ್ಪಿಕೊಂಡಿದ್ದಾರೆ. ಮತ್ತು ಒಳಚರಂಡಿ ಮಂಡಳಿಯವರೂ ಸಹ ಆ ಕೆರೆಗೆ ಕಲುಷಿತ ನೀರು ಹೋಗಬಾರದು ಎನ್ನುವ ದೃಷ್ಟಿಯಿಂದ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಆ ಕಲುಷಿತ ನೀರನ್ನು ಕೂಡ ಈಗ ತಪ್ಪಿಸಿದ್ದೇವೆ. ಮತ್ತು ಹೂಳು ಎತ್ತುವ ಯೋಜನೆಯನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಆ ಪ್ರಕಾರ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ವಿಷಯ :- ರಾಜ್ಯದಲ್ಲಿ ಖಾಸಗೀ ಕೈಗಾರಿಕಾ ತರಬೇತಿ ಕೇಂದ್ರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 400 (3020)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಖಾಸಗೀ ಐ.ಟಿ.ಐ. ಸಂಸ್ಥೆಗಳಿವೆ ;

ಆ) ಈ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ ;

ಇ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಐ.ಟಿ.ಐ. ಸಂಸ್ಥೆಗಳನ್ನು ಈ ವರೆಗೂ ಪ್ರಾರಂಭಿಸಲಾಗಿದೆ ;

ಈ) ಶಿಗ್ಗಾಂವದಲ್ಲಿ ನೂತನವಾಗಿ ಐ.ಟಿ.ಐ. ಸಂಸ್ಥೆಯನ್ನು ಸರ್ಕಾರದವರು ಪ್ರಾರಂಭಿಸಲು ಯೋಜಿಸಿರುವರೆ ;

ಉ) ಇಲ್ಲವಾದಲ್ಲಿ ಹುಬ್ಬಳ್ಳಿಯಿಂದ ಸರಕಾರೀ ಐ.ಟಿ.ಐ. ಸಂಸ್ಥೆಯಿಂದ ಶಿಗ್ಗಾಂವಗೆ ಕೆಲವು ಟ್ರೇಡ್ ಶಿಫ್ಟ್ ಮಾಡಲಾಗುವುದೇ?